## ಹತ್ತನೆಯ ತರಗತಿ - ಪ್ರಥಮ ಭಾಷೆ ಕನ್ನಡ

### ಶಿಕ್ಷಕರಿಗೆ ಸೂಚನೆಗಳು

**ಆತ್ಮೀಯ ಶಿಕ್ಷಕ ಬಂಧುಗಳೇ,**

ಸೇತುಬಂಧ ಕಾರ್ಯಕ್ರಮವು ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ ಸೇತುಬಂಧ ನವೀನ ಹಾಗೂ ಸವಾಲಿನಿಂದ ಕೂಡಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಶಾಲೆಗಳು ಸಮರ್ಪಕವಾಗಿ ನಡೆದಿಲ್ಲವಾದ ಕಾರಣ ಈ ಸಾಲಿನ ಶೈಕ್ಷಣಿಕ ವರ್ಷದ ಸೇತುಬಂಧ ಕಾರ್ಯಕ್ರಮವು ಶಿಕ್ಷಕರಾದ ನಮಗೆ ಸವಾಲಾಗಿದೆ. ವಿದ್ಯಾರ್ಥಿಗಳು ಆಯಾ ತರಗತಿಯಲ್ಲಿ ಗಳಿಸಬೇಕಾದ ಸಾಮರ್ಥ್ಯವನ್ನು ಗಳಿಸಲು ಕಷ್ಟಸಾಧ್ಯವಾಗಿರುವುದರಿಂದ ಕಲಿಕಾ ಕೊರತೆ ಉಂಟಾಗಿರುತ್ತದೆ. ಇದನ್ನು ಸರಿದೂಗಿಸುವ ನಿಟ್ಟಿನಲ್ಲಿ ಈ ಸಾಹಿತ್ಯವು ಪೂರಕವಾಗಿರುತ್ತದೆ.

ಶಿಕ್ಷಕರು ಸೇತುಬಂಧ ಸಾಹಿತ್ಯದಲ್ಲಿರುವ ಮೂವತ್ತು ದಿನಗಳ 'ಬಂಧ' ಸಾಹಿತ್ಯದಲ್ಲಿ ನೀಡಿರುವ ಸೂಚನೆಯಂತೆ ಚಟುವಟಿಕೆಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಸದರಿ ತರಗತಿಗೆ ಸಿದ್ಧಗೊಳಿಸಬೇಕು.

ಈ ಹಂತದ ಬೋಧನಾ ಕಲಿಕಾ ಪ್ರಕ್ರಿಯೆಯು ಶಿಶು ಕೇಂದ್ರಿತ, ಚಟುವಟಿಕೆ ಆಧಾರಿತ ಮತ್ತು ಸಂತಸದಾಯಕ ಕಲಿಕೆಗೆ ಒತ್ತು ನೀಡುವಂತಿರಬೇಕು. ಇದಕ್ಕಾಗಿ ಶಿಕ್ಷಕರು ಉತ್ತಮ ರೀತಿಯಲ್ಲಿ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಅಗತ್ಯ ಮತ್ತು ಅತ್ಯಂತ ಅನಿವಾರ್ಯವಾಗಿದ್ದು ನಿಮ್ಮ ಸೃಜನಶೀಲತೆಗೆ ಪೂರ್ಣ ಅವಕಾಶವಿರುತ್ತದೆ.

- ಸೇತುಬಂಧ ಕಾರ್ಯಕ್ರಮದ ಈ ಸಾಹಿತ್ಯವನ್ನು ಶಿಕ್ಷಕರು ಓದಿ, ಅರ್ಥೈಸಿಕೊಳ್ಳುವುದು.
- ಇಲ್ಲಿನ ಚಟುವಟಿಕೆಗಳು ಕೇವಲ ಮಾದರಿಯಷ್ಟೆ. ಶಿಕ್ಷಕರು ವಿಭಿನ್ನವಾದ ರೀತಿಯಲ್ಲಿ ಸೃಜನಾತ್ಮಕವಾಗಿ ಚಟುವಟಿಕೆಗಳನ್ನು ರೂಪಿಸಿಕೊಳ್ಳುವುದು.
- ಹತ್ತನೆಯ ತರಗತಿಯ ಈ ಸಾಹಿತ್ಯದಲ್ಲಿ ಎಂಟು ಮತ್ತು ಒಂಬತ್ತನೆಯ ತರಗತಿಯ ಅಪೇಕ್ಷಿತ ಕಲಿಕಾಫಲ ಹಾಗೂ ಕಲಿಕಾಂಶಗಳನ್ನು ಗಮನಿಸಿ ಚಟುವಟಿಕೆಗಳನ್ನು ರೂಪಿಸಲಾಗಿದೆ.
- ಈ ಸಾಹಿತ್ಯದಲ್ಲಿ ಅನೇಕ ಸಲಹಾತ್ಮಕ ಚಟುವಟಿಕೆಗಳನ್ನು ನೀಡಲಾಗಿದ್ದು ಶಿಕ್ಷಕರು ನಿರ್ವಹಿಸಬೇಕಾದ ಒಂದು ಚಟುವಟಿಕೆಯ ಬಗ್ಗೆ ವಿವರಣೆ ನೀಡಲಾಗಿದೆ. ಉಳಿದ ಚಟುವಟಿಕೆಗಳ ಹೆಸರುಗಳನ್ನು ಮಾತ್ರ ನೀಡಲಾಗಿದ್ದು ಶಿಕ್ಷಕರು ತಮಗೆ ಇಷ್ಟವಾದ ಚಟುವಟಿಕೆಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ತಿಳಿಸಿದೆ.

'ಬಂಧ' ಸಾಹಿತ್ಯ

| ಆಲಿಸುವುದು | | | | |
|---|---|---|---|---|
| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಳು |
| 1 | ಪಠ್ಯವಸ್ತುವಿನಲ್ಲಿರುವ ಗದ್ಯಗಳನ್ನು / ಪದ್ಯಗಳನ್ನು / ನಾಟಕಗಳನ್ನು ಆಲಿಸಿ, ಅರ್ಥಮಾಡಿಕೊಳ್ಳುವರು. | ಶಿಕ್ಷಕರು ಓದಿದ ಗದ್ಯಭಾಗವನ್ನು ಆಲಿಸಿ, ಅರ್ಥ ಮಾಡಿಕೊಳ್ಳುತ್ತಾರೆ | 1.1 ಆಲಿಸಿ - ವರ್ಗೀಕರಿಸಿ<br>1.2 ಲಲಿತ ಪ್ರಬಂಧ / ಲೇಖನ / ಆಲಿಸುವುದು.<br>1.3 ಪತ್ರಿಕಾ ವಾಚನ<br>1.4 ಸಣ್ಣ ಕಥೆಗಳನ್ನು ಆಲಿಸುವುದು | 1.1 ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದ ಹಲವಾರು ಪದಗಳನ್ನು ಮಿಶ್ರಣಮಾಡಿ ಹೇಳುವುದು, ಆಲಿಸಿದ ವಿದ್ಯಾರ್ಥಿಗಳು ಕ್ಷೇತ್ರಕ್ಕನುಗುಣವಾಗಿ ಪದಗಳನ್ನು ವರ್ಗೀಕರಿಸಿ ಆ ಪದಗಳ ಗುಂಪಿಗೆ ಒಂದೊಂದು ಹೆಸರನ್ನು ನೀಡಲು ಮಾರ್ಗದರ್ಶನ ನೀಡಿ.<br>ಉದಾ: ಕಪ್ಪು ಹಲಗೆ, , ಕೀಟನಾಶಕ, ಪ್ರಯೋಗಾಲಯ, ಉಳುಮೆ, ಸಮವಸ್ತ್ರ ,ಪೈರು, ಗ್ರಥಾಲಯ ನೇಗಿಲು ( ಶಾಲೆ, ಕೃಷಿ )<br>1.2 ಸರಳವಾದ ಲಲಿತ ಪ್ರಬಂಧ / ಲೇಖನ / ಸ್ವರಭಾರದೊಂದಿಗೆ ಓದುವುದು. ಸರಳ ಪ್ರಶ್ನೆಗಳನ್ನು ಕೇಳಿ, ಉತ್ತರ ಪಡೆಯಿರಿ. |

| | | | | |
|---|---|---|---|---|
| 2 | | ಶಿಕ್ಷಕರು ವಾಚನ ಮಾಡಿದ ಪದ್ಯ ಭಾಗವನ್ನು ಆಲಿಸಿ. ಅರ್ಥಮಾಡಿಕೊಂಡು, ಸಾರಾಂಶವನ್ನು ಅರ್ಥಮಾಡಿ ಕೊಳ್ಳುತ್ತಾರೆ. | 2.1 ಪದ್ಯಗಳ ವಾಚನ<br>2.2 ಕವಿತೆಗಳ ಗಾಯನ<br>2.3 ಮಧುರ ಮಧುರವೀ ಮಂಜುಳಗಾನ | 2.1 ಆಯ್ದ ಪದ್ಯಭಾಗವೊಂದನ್ನು ವಾಚನ ಮಾಡಿ / ಧ್ವನಿಸುರುಳಿಯನ್ನು ಕೇಳಿಸಿ ಪದ್ಯಭಾಗದಲ್ಲಿ ಬಂದಿರುವ ಪದಗಳನ್ನು ಮನನ ಮಾಡಿಕೊಂಡು ಹೇಳಲು ಅನುಕೂಲಿಸಿ.<br>2.3 ವಿದ್ಯಾರ್ಥಿಗಳಿಗೆ ಇಷ್ಟವಾದ ಚಿತ್ರಗೀತೆಗಳನ್ನು ಹಾಡಿಸಿ. |
| 3 | | ಶಿಕ್ಷಕರು ಓದಿದ ನಾಟಕದ ಭಾಗದಲ್ಲಿರುವ ಸಂಭಾಷಣೆಗಳನ್ನು ಆಲಿಸಿ, ಅರ್ಥ ಮಾಡಿಕೊಳ್ಳುತ್ತಾರೆ. | 3.1ನಾಟಕ ವಾಚನ<br>3.2 ನಾಟಕಾಭಿನಯ<br>3.3 ಏಕಪಾತ್ರಾಭಿನಯ<br>3.4 ನಾಟಕ ಪ್ರದರ್ಶನ | 3.1 ತರಗತಿಯಲ್ಲಿ ಗುಂಪುಗಳನ್ನು ಮಾಡಿ ನಾಟಕದ ಆಯ್ದಭಾಗಗಳನ್ನು ನೀಡಿ ವಾಚನ ಮಾಡಿಸಿ.<br>3.2 ವಿದ್ಯಾರ್ಥಿಗಳಿಂದ ನಾಟಕವನ್ನು ಓದಿಸಿ, ಪಾತ್ರವನ್ನು ಹಂಚಿ ಅಭಿನಯ ಮಾಡಿಸಿ. |

| ಮಾತನಾಡುವುದು | | | | |
|---|---|---|---|---|
| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
| 4 | ಹಳಗನ್ನಡ / ನಡುಗನ್ನಡ / ಹೊಸಗನ್ನಡ ಸಾಹಿತ್ಯ ಪ್ರಕಾರಗಳನ್ನು ಓದಿ ಅರ್ಥೈಸಿಕೊಂಡು ಸಾರಾಂಶವನ್ನು ಹೇಳುವರು. | ಶಿಕ್ಷಕರು ಓದಿದ ಹಳಗನ್ನಡದ ಪದ್ಯಭಾಗವನ್ನು ಆಲಿಸಿ, ಅರ್ಥೈಸಿಕೊಂಡು ಪದ್ಯದ ಸಾರಾಂಶವನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. | 4.1 ಪದ್ಯ ಓದು ಮಾತನಾಡು<br>4.2 ಆಶುಭಾಷಣ<br>4.3 ಬಿಡಿಸಿ ಓದಿಸಿ | 4.1 ವಿದ್ಯಾರ್ಥಿಗಳ ಪ್ರತೀ ಗುಂಪಿಗೆ ಒಂದೊಂದು ಹಳಗನ್ನಡ ಪದ್ಯಭಾಗವನ್ನು ನೀಡಿ, ಓದಿಸಿ, ಆಪದ್ಯದ ಬಗ್ಗೆ ಮಾತನಾಡಿಸಿ.<br>4.2 ಪದ್ಯಭಾಗದಲ್ಲಿ ಬಂದಿರುವ ಪಾತ್ರಗಳನ್ನು ನೀಡಿ ಆಶುಭಾಷಣ ನಡೆಸಿ. |
| 5 | | ಶಿಕ್ಷಕರು ವಾಚಿಸಿದ ನಡುಗನ್ನಡ ಪದ್ಯಭಾಗವನ್ನು ಆಲಿಸಿ, ಅರ್ಥೈಸಿಕೊಂಡು ಪದ್ಯದ ಸಾರಾಂಶವನ್ನು | 5.1ನಡುಗನ್ನಡ ಪದ್ಯವಾಚನ<br>5.2 ನಡುಗನ್ನಡ - ಕವಿ ಸಂಗಡ<br>5.3 ಪದ್ಯ ಆಲಿಸು- | 5.2 ನಡುಗನ್ನಡ ಪದ್ಯವನ್ನು ಹೇಳಿಸಿ ಕವಿಯ ಜೀವನ ಸಾಧನೆಯ ಬಗ್ಗೆ ಮಾತನಾಡಿಸಿ.<br>5.4 ಪರಿಚಿತ ನಡುಗನ್ನಡ |

| | | | | |
|---|---|---|---|---|
| | | ಮೌಖಿಕವಾಗಿ / ಅಭಿವ್ಯಕ್ತಪಡಿಸುತ್ತಾರೆ. | ಕಥೆಹೇಳಿಸು. 5.4 ಪೂರ್ವ ಕಥೆಯ – ಜೊತೆ | ಪದ್ಯವನ್ನು ನೀಡಿ ಅದರ ಪೂರ್ವ ಕಥೆಯನ್ನು ಹೇಳಿಸಿ. |
| 6 | | ಶಿಕ್ಷಕರು ವಾಚಿಸಿದ ಹೊಸಗನ್ನಡದ ಪದ್ಯಭಾಗವನ್ನು ಲಿಸಿ, ಅರ್ಥೈಸಿಕೊಂಡು ಪದ್ಯದ ಸಾರಾಂಶವನ್ನು ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. | 6.1 ಹೊಸಗನ್ನಡ ಪದ್ಯ ವಾಚನ 6.2 ಪದ್ಯ ದು ಸಾರಾಂಶ ಹೇಳು 6.3 ಪದ್ಯ ಕೇಳಿ ಮಾತನಾಡು | 6.3 ನಾಡು- ನುಡಿಗೆ ಸಂಬಂಧಿಸಿದ ಹೊಸಗನ್ನಡ ಕವಿತೆಗಳನ್ನು ಕೇಳಿಸಿ ಅದರ ಬಗ್ಗೆ ಮಾತನಾಡಿಸಿ. |
| 7 | ಪಠ್ಯದಲ್ಲಿ ಬರುವ ಪಾತ್ರಗಳ ಸಂಭಾಷಣೆ / ಪಾತ್ರಗಳ ವರ್ತನೆಗಳ ವಿಭಿನ್ನ ಸ್ವರೂಪಗಳನ್ನು ತಾರ್ಕಿಕವಾಗಿ ವಿಮರ್ಶಿಸುವರು. | ಹಿಂದಿನ ತರಗತಿಯಲ್ಲಿ ಓದಿದ / ಆಲಿಸಿದ ವಿಷಯಗಳ ಮೌಲ್ಯವನ್ನು ಕುರಿತು ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. | 7.1ಮೌಲ್ಯವನ್ನು ಗುರುತಿಸಿ. 7.2 ಮೌಲ್ಯಕ್ಕೊಂದು ಕಥೆ 7.3 ಮೌಲ್ಯಕ್ಕೊಂದು ಮಾತು | 7.1ಹಿಂದಿನ ತರಗತಿಯಲ್ಲಿ ಓದಿದ ಗದ್ಯ / ಪದ್ಯ / ನಾಟಕಗಳಲ್ಲಿರುವ ಮೌಲ್ಯವನ್ನು ಗುರುತಿಸಿ ಹೇಳಿಸಿ. 7.2 ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ನೀಡಿ ಅದಕ್ಕೆ ಸಂಬಂಧಿಸಿದಂತೆ ಕಥೆಗಳನ್ನು ಹೇಳಲು ಅನುಕೂಲಿಸಿ ಉದಾ; ಸತ್ಯ, ಪ್ರಾಮಾಣಿಕತೆ….. 7.3 ಮೌಲ್ಯಗಳನ್ನು ನೀಡಿ ಅವುಗಳ ಬಗ್ಗೆ ಮಾತನಾಡಲು ಮಾರ್ಗದರ್ಶನ ಮಾಡಿ. ಉದಾ:ಪರೋಪಕಾರ,ಅಹಿಂಸೆ … |
| 8 | | ಹಿಂದಿನ ತರಗತಿಯಲ್ಲಿನ ವಿಷಯಗಳಲ್ಲಿರುವ ಪಾತ್ರಗಳ ಸಂಭಾಷಣೆಯನ್ನು ವಿಮರ್ಶಿಸಿ, ಮೌಖಿಕವಾಗಿ ಅಭಿವ್ಯಕ್ತಪಡಿಸುತ್ತಾರೆ. | 8.1 ಪರಾಮರ್ಶಿಸು – ವಿಮರ್ಶಿಸು 8.2 ಪಟ್ಟಿ ಮಾಡು – ಮಾತನಾಡು 8.3 ನಾನುಮೆಚ್ಚಿದ ಪಾತ 8.4 ನಾನು | 8.1 ಪ್ರತೀ ಗುಂಪಿಗೆ ಹಿಂದಿನ ತರಗತಿಯ ಪಾಠಗಳಲ್ಲಿ ಬಂದಿರುವ ಪಾತ್ರಗಳ ಸಂಭಾಷಣೆಯನ್ನು ನೀಡಿ, ಪಾತ್ರಗಳ ಮಹತ್ತ್ವವನ್ನು ವಿಮರ್ಶಿಸಿ, ಮೌಖಿಕವಾಗಿ ವಿವರಿಸಲು ಅನುಕೂಲಿಸಿ. 8.2 ಹಿಂದಿನ ತರಗತಿಗಳಲ್ಲಿನ |

| | | | | |
|---|---|---|---|---|
| | | | ಮೆಚ್ಚಿದ ಕವಿ / ಲೇಖಕ | ಪಾಠಗಳಲ್ಲಿರುವ ಪಾತ್ರಗಳನ್ನು ಪಟ್ಟಿಮಾಡಿಸಿ ಅದರ ಬಗ್ಗೆ ಮಾತನಾಡಿಸಿ. |
| 9 | | ಆಲಿಸಿದ / ಓದಿದ / ಕಲ್ಪಿಸಿಕೊಂಡ ಸನ್ನಿವೇಶ ಘಟನೆಗಳನ್ನು ನಿಜ ಜೀವನ ಹಾಗೂ ಇತರ ಸನ್ನಿವೇಶಗಳೊಂದಿಗೆ ಹೋಲಿಸಿ ಮಾತನಾಡುತ್ತಾರೆ. | 9.1 ಊಹಿಸಿ ಮಾತನಾಡುವುದು.<br>9.2 ರೇ…! ಪ್ರಪಂಚ<br>9.3 ಘಟನೆಗೊಂದು ಮಾತು | 9.1 ನಾನು ಶಿಕ್ಷಕನಾದರೆ? / ಶಿಕ್ಷಣ ಮಂತ್ರಿಯಾದರೆ? ಹೀಗೆ ವಿದ್ಯಾರ್ಥಿಯು ಊಹಿಸಿ ಮಾತನಾಡಲು ಮಾರ್ಗದರ್ಶನ ನೀಡಿ.<br>9.2 ಪೆಟ್ರೋಲ್-ಡೀಸೆಲ್ ಮುಗಿದು ಹೋದರೇ..! ಮಳೆಯೇ ಬಾರದೆ ಹೋದರೇ…! ಈ ರೀತಿಯ ಹೇಳಿಕೆಗಳನ್ನು ನೀಡಿ ಮಾತನಾಡಿಸಿ.<br>9.3 ಪತ್ರಿಕೆಯಲ್ಲಿನ ಘಟನೆಗಳನ್ನು ಕುರಿತು ಮಾತನಾಡಿಸಿ. |
| 10 | ಚರ್ಚೆ ಮತ್ತು ಸಂಭಾಷಣೆಗಳಲ್ಲಿ ಭಾಗವಹಿಸಿ ತಾರ್ಕಿಕ ವಾದವನ್ನು ಮಂಡಿಸುವರು. | ನೀಡಿದ ವಿಷಯವನ್ನುಕುರಿತು ತಾರ್ಕಿಕವಾಗಿ ವಾದಮಾಡುತ್ತಾರೆ . | 10.1 ಚರ್ಚಾ ಸ್ಪರ್ಧೆ<br>10.2 ಹರಟೆ<br>10.3 ಆಶುಭಾಷಣ<br>10.4 ಧನಾತ್ಮಕ – ಋಣಾತ್ಮಕ | 10.1 ಸಮಕಾಲೀನ ವಿಚಾರಗಳನ್ನು ಕುರಿತು ಚರ್ಚೆಯನ್ನು ಏರ್ಪಡಿಸುವುದು.<br>10.4 ಒಂದೇವಿಚಾರನ್ನು ಕುರಿತು ಒಬ್ಬನೇ ವಿದ್ಯಾರ್ಥಿ ಸೂಚನೆಯನ್ನು ಅನುಸರಿಸಿ ಧನಾತ್ಮಕವಾಗಿ ಮತ್ತು ಋಣಾತ್ಮಕವಾಗಿ ಮಾತನಾಡಲು ಅನುಕೂಲಿಸಿ. |
| 11 | | ನೀಡಿದ ವಿಷಯಕ್ಕೆ ಅನುಗುಣವಾಗಿ ಸಂವಾದ ನಡೆಸುತ್ತಾರೆ / ತಿಳಿದ ವಿಷಯದ ಬಗ್ಗೆ ಮಾತನಾಡುತ್ತಾರೆ. | 11.1 ಸಂವಾದ<br>11.2 ನನ್ನದೇ ಮಾತು<br>11.3 ಪದ್ಯಕ್ಕೊಂದು ಸಂವಾದ | 11.1 ಉಪಯುಕ್ತವಾದ ಶೈಕ್ಷಣಿಕ ವಿಚಾರಗಳನ್ನು ಕುರಿತು ಸಂವಾದವನ್ನು ಏರ್ಪಡಿಸಿ.<br>11.2 ತಾನು ತಿಳಿದಿರುವ ವಿಷಯದ ಬಗ್ಗೆ ಸ್ವತಂತ್ರವಾಗಿ ಮಾತನಾಡಲು ತಿಳಿಸಿ. |

| ಓದುವುದು | | | | |
|---|---|---|---|---|
| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
| 12 | ಗ್ರಂಥಾಲಯದ ಪುಸ್ತಕಗಳು / ಸಾರ್ವಜನಿಕ ಕರಪತ್ರಗಳು / ದಿನಪತ್ರಿಕೆಗಳು / ಕೈಬರೆಹದ ಸಾಹಿತ್ಯಗಳನ್ನು ಓದುವರು | ಲೇಖನ ಚಿನ್ಹೆಗಳನ್ನು ಗಮನಿಸಿ, ಸ್ವರ ಭಾರದೊಂದಿಗೆ ದಿನಪತ್ರಿಕೆಗಳನ್ನು ಸ್ಪಷ್ಟವಾಗಿ ನಿರರ್ಗಳವಾಗಿ ಓದುತ್ತಾರೆ' | 12.1 ಪತ್ರಿಕಾ ವಾಚನ<br>12.2 ಓಲೆ – ಓದು<br>12.3 ಚಿನ್ಹೆಗಳನ್ನು ಗಮನಿಸು- ವೇಗವಾಗಿ ಓದು<br>12.4 ಮೌನ ಓದು | 12.1 ಸಂಗ್ರಹಿಸಿದ ಪತ್ರಿಕೆಯ ಸ್ವಾರಸ್ಯ ಭಾಗಗಳನ್ನು ಓದಿಸುವುದು.<br>12.4 ವಿದ್ಯಾರ್ಥಿಗಳಿಗೆ ಮೌನವಾಗಿ ಓದಲು ತಿಳಿಸಿ ಪರಸ್ಪರ ಪ್ರಶ್ನೆಗಳ ಮೂಲಕ ಉತ್ತರ ಪಡೆಯಲು ಅನುಕೂಲಿಸಿ. |
| 13 | | ಗ್ರಂಥಾಲಯ ಪುಸ್ತಕಗಳನ್ನು ಓದಿ, ಅರ್ಥೈಸಿಕೊಂಡು ಟಿಪ್ಪಣಿಯನ್ನು ಮಾಡುತ್ತಾರೆ. | 13.1 ಟಿಪ್ಪಣಿ ಬರೆ -ಜೋರಾಗಿ ಓದು<br>13.2 ಇಷ್ಟಪಟ್ಟು ಓದು<br>13.3 ಬರೆಯೋದು ನಾನು - ಓದೋದು ನೀನು | 13.1 ಗ್ರಂಥಾಲಯದಲ್ಲಿ ಲಭ್ಯವಿರುವ ನೀತಿ ಬೋಧಕ ಕಥೆಗಳನ್ನು ನೀಡಿ, ಟಿಪ್ಪಣಿ ಮಾಡಿ ಓದುವಂತೆ ತಿಳಿಸಿ.<br>13.2 ವಿದ್ಯಾರ್ಥಿಗಳಿಗೆ ಇಷ್ಟವಾದ ಭಾಗವೊಂದನ್ನು ಆರಿಸಿಕೊಂಡು ಓದಲು ತಿಳಿಸಿ.<br>13.3 ಸ್ನೇಹಿತರ ಬರೆವಣಿಗೆಯನ್ನು ಅದಲು-ಬದಲು ಮಾಸಿ ಓದಿಸಿ. |
| 14 | ಸ್ವಕಲಿಕೆಗಾಗಿ ಶಬ್ಧಕೋಶ / ವಿಶ್ವಕೋಶ / ಇತರ ಆಕರ ಸಾಹಿತ್ಯಗಳನ್ನು ಬಳಸುವರು / ಉಪಯೋಗಿಸುವರು. | ಶಬ್ಧಕೋಶದಲ್ಲಿ ತಮಗೆ ಬೇಕಾದ ಪದಗಳಿಗೆ ಸಮಾನಾರ್ಥಕ ಪದಗಳನ್ನು ಹುಡುಕಿ ಅರ್ಥೈಸಿಕೊಳ್ಳುತ್ತಾರೆ. | 14.1 ಕೋಶತೆರೆ - ಅರ್ಥಹುಡುಕು<br>14.2 ಪದಕ್ಕೊಂದು ವಿವರಣೆ<br>14.3 ನಾಟಕ – ಓದು | 14.1 ಪ್ರತೀ ಗುಂಪಿಗೂ ಪದಗಳ ಪಟ್ಟಿಯನ್ನು ನೀಡಿ, ಶಬ್ದಕೋಶವನ್ನು ಬಳಸಿ, ಅರ್ಥ ಹುಡುಕಿ, ಬರೆದು, ಓದುವಂತೆ ತಿಳಿಸಿ.<br>14.2 ಪಾರಿಭಾಷಿಕ ಪದಗಳನ್ನು ನೀಡಿ ವಿವರಣೆಯನ್ನು ಬರೆಯಿಸಿ ಓದಿಸಿ. |
| 15 | ವಿವಿಧ ಪದಗಳ ಚ್ಛಾಬರಣೆಯಲ್ಲಿರುವ ಧ್ವನಿ ಸಾಮ್ಯತೆ ಮತ್ತು ಧ್ವನಿವ್ಯತ್ಯಾಸಗಳನ್ನು | ಓದಿದ ಸಾಹಿತ್ಯದಲ್ಲಿನ ಪದಗಳ ಸಮಾನಾರ್ಥಕ, ಭಿನ್ನಾರ್ಥಕ , ವಿರುದ್ಧಾರ್ಥಕ | 15.4 ಪದ – ಬಂಧ<br>15.2 ಪದ ಕೋಷ್ಟಕ<br>15.3 ಪದಬಳಸಿ - | 15.2 ಸಮಾನಾರ್ಥಕ, ಭಿನ್ನಾರ್ಥಕ , ವಿರುದ್ಧಾರ್ಥಕ ಪದಗಳಿರುವ ವಿವಿಧ ಚೌಕಗಳನ್ನು ಸಿದ್ಧ ಪಡಿಸಿ |

| | | | | |
|---|---|---|---|---|
| | ಅರ್ಥಮಾಡಿಕಳ್ಳುವುದು. | ಪದಗಳನ್ನು ತಿಳಿಯುವರು. | ವಾಕ್ಯ ರಚಿಸಿ | ಸೂಚಿಸಿದ ಪದಗಳನ್ನು ಪಟ್ಟಿ ಮಾಡಿಸಿ ಓದಿಸಿ.<br>15.3 ದ್ವಿರುಕ್ತಿ – ಜೋಡುನುಡಿಗಳನ್ನು ನೀಡಿ ಸ್ವಂತ ವಾಕ್ಯ ಮಾಡಿಸಿ ಓದಿಸಿ. |

**ಬರೆಯುವುದು**

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| 16 | ಕಥೆಗಳು / ಕವಿತೆಗಳು / ಇತರೆ ಸಾಹಿತ್ಯ ಪ್ರಕಾರಗಳನ್ನು ಪ್ರಶಂಸಿಸುವರು ಮತ್ತು ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸುವರು. | ಹೇಳಿದ ಕಥೆಯನ್ನು ಆಲಿಸಿ, ಅರ್ಥೈಸಿಕೊಂಡು, ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. | 16.1ಕಥೆಯನ್ನು ಪೂರ್ಣಗೊಳಿಸುವುದು.<br>16.2 ಪೂರ್ಣ – ಅಪೂರ್ಣ<br>16.3 ದೃಶ್ಯ ನೋಡಿ ಬರೆ | 16.1 ತಾರ್ಕಿಕ ಹಿನ್ನೆಲೆಯುಳ್ಳ ಕಥೆಯ ಅರ್ಧಭಾಗವನ್ನು ಹೇಳಿ, ವಿದ್ಯಾರ್ಥಿಗಳಿಂದ ಅದನ್ನು ಪೂರ್ಣಗೊಳಿಸಿ, ಬರೆಯಿಸಿ.<br>16.2 ಗಾದೆಗಳ ಅರ್ಧಭಾಗವನ್ನು ಕಪ್ಪು ಹಲಗೆಯಲ್ಲಿ ಬರೆದು ಅದನ್ನು ಪೂರ್ಣಗೊಳಿಸಿ ಬರೆಯಲು ತಿಳಿಸಿ.<br>16.3 ದೃಕ್ ಶ್ರವಣೋಪಕರಣದಲ್ಲಿ ವಿಡಿಯೋ ತುಣುಕನ್ನು ತೋರಿಸಿ ಅದರ ಬಗ್ಗೆ ಬರೆಯಿಸಿ.<br>ಉದಾ: ಜನಪದ ಕಲೆ , ಪ್ರಕೃತಿ ವಿಕೋಪಗಳು |
| 17 | | ಹೇಳಿದ ಕವಿತೆಯನ್ನು ಆಲಿಸಿ, ಅರ್ಥೈಸಿಕೊಂಡು, ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. | 17.1 ಆಲಿಸಿ ಬರೆ<br>17.2 ಕವಿಕುರಿತು ಬರೆ<br>17.3 ಸಾರ - ವಿಸ್ತಾರ | 17.1 ಹಿಂದಿನ ತರಗತಿಗಳಲ್ಲಿ ಪರಿಚಿತವಾಗಿರುವ ಕವಿತೆಗಳನ್ನು ವಾಚಿಸಿ, ಸಂಬಂಧಿಸಿದಂತೆ ಪ್ರಶ್ನೆಗಳನ್ನು ನೀಡಿ ಉತ್ತರ ಬರೆಯಿಸಿ.<br>17.2 ವಿದ್ಯಾರ್ಥಿಗೆ ಇಷ್ಟವಾದ ಕವಿಯ ಬಗ್ಗೆ ಬರೆಯಿಸಿ.<br>17.3 ನೀಡಿದ ಪದ್ಯ ಭಾಗಕ್ಕೆ ಸಾರಾಂಶವನ್ನು ಬರೆಯಲು ಅನುಕೂಲಿಸಿ. |
| 18 | | ಓದಿದ ಲೇಖನವನ್ನು / | 18.1 | 18.1 ಆಯ್ದ ಲೇಖನವನ್ನು |

| | | | | |
|---|---|---|---|---|
| | | ಕಥನ ಕವನ / ಇತ್ಯಾದಿಗಳನ್ನು ಆಲಿಸಿ, ಅರ್ಥೈಸಿಕೊಂಡು, ಏಕೆ? ಹೇಗೆ? ಹಾಗಾದರೆ? ಹಾಗಾಗದಿದ್ದರೆ? ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಬರೆಯುತ್ತಾರೆ. | ಸವಾಲ್ - ಜವಾಬ್<br><br>18.2 ಕಥನ – ಕವನ<br><br>18.3 ಚಿಂತನ - ಮಂಥನ | ಶಿಕ್ಷಕರು ಓದುವುದು / ಓದಿಸಿ. ಇದನ್ನಾಧರಿಸಿದ ಪ್ರಶ್ನೆಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ವಿದ್ಯಾರ್ಥಿಗಳಿಂದ ಉತ್ತರ ಬರೆಯಿಸಿ.<br>18.2 ಕಥನ ಕವನವನ್ನು ಓದಿಸಿ ಸಂಭಾಷಣಾ ರೂಪದಲ್ಲಿ ಬರೆಯಲು ಮಾರ್ಗದರ್ಶನ ನೀಡಿ.<br>18.3 ಕೆಲವು ತಾರ್ಕಿಕ ವಿಷಯಗಳನ್ನು ನೀಡಿ ಚಿಂತನೆ ಮಾಡಿಸಿ, ಏನು? ಏಕೆ/ ಹೇಗೆ? ಎಂಬುದರ ಬಗ್ಗೆ ಬರೆಯಿಸಿ.<br>ಉದಾ: ಮಳೆ . ಭೂಕಂಪ, ಗ್ರಹಣ….. |
| 19 | ಸಂಧಿಗಳು / ಸಮಾಸಗಳು / ವಿಭಕ್ತಿ ಪ್ರತ್ಯಯ / ಕ್ರಿಯಾಪದ / ಅಲಂಕಾರ / ಛಂದಸ್ಸು ಮೊದಲಾದ ವ್ಯಾಕರಣದ ರಚನೆಗಳು ಮತ್ತು ತತ್ತ್ವಗಳನ್ನು ಅರ್ಥೈಸಿಕೊಳ್ಳುವರು. | ನೀಡಿದ ಪದಗಳಲ್ಲಿರುವ ಸಂಧಿಯನ್ನು ಬಿಡಿಸಿ, ಬರೆಯುತ್ತಾರೆ. | 19.1 ಚೀಟಿ ಎತ್ತಿಕೋ – ಗುಂಪು ಸೇರಿಕೋ<br>19.2 ಹೊಂದಿಸಿ ಬರೆಯಿರಿ<br>19.3 ಗುಂಪಿನಿಂದ ಹೊರಗೆತೆಗೆ | 19.1 ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಪ್ರತೀ ಸಂಧಿಗೂ ಸಮನಾಗಿ ಸಂಧಿ ಪದಗಳನ್ನು ಬರೆದ ಚೀಟಿಗಳನ್ನು ಡಬ್ಬದಲ್ಲಿ ಹಾಕುವುದು.ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ಚೀಟಿಯನ್ನು ತೆಗೆದು ಕೊಂಡು ಆಯಾಯ ಗುಂಪಿನಲ್ಲಿ ಸೇರಿಕೊಳ್ಳುವುದು.ಗುಂಪಿನಲ್ಲಿ ಪದಗಳನ್ನು ಬಿಡಿಸಿ ಬರೆಯಿಸಿ.<br>19.3 ಸಂಧಿ ಪದಗಳ ಉದಾಹರಣೆಗಳನ್ನು ನೀಡಿ ಸರಿಹೊಂದದ ಪದವನ್ನು ಗುರುತಿಸಿ ಬರೆಯಲು ತಿಳಿಸಿ. |
| 20 | | ನೀಡಿದ ಸಮಾಸಪದಗಳ ವಿಗ್ರಹವಾಕ್ಯವನ್ನು ಮಾಡಿ ಸಮಾಸದ ಹೆಸರು ಬರೆಯುತ್ತಾರೆ. | 20.1 ಸಮಾಸಪದ ಗಳ ವಿಗ್ರಹವಾಕ್ಯ ಮಾಡಿಸು ವುದು. | 20.1 ಸಿದ್ಧಪಡಿಸಿಕೊಂಡಿರುವ ಸಮಾಸಪದಗಳ ಪಟ್ಟಿಯನ್ನು ವಿದ್ಯಾರ್ಥಿಗಳಿಗೆ ನೀಡಿ ವಿಗ್ರಹವಾಕ್ಯ ಮಾಡಿ, ಸಮಾಸದ ಹೆಸರನ್ನು ಬರೆಯಿಸಿ. |

| | | | | |
|---|---|---|---|---|
| | | | 20.2 ಹೊಂದಿಸಿ ಬರೆ.<br>20.3 ನನ್ನನ್ನು ನನ್ನ ಮನೆಗೆ ಸೇರಿಸು | 20.3 ಸಮಾಸದ ಉದಾಹರಣೆಗಳನ್ನು ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಚೀಟಿಯಲ್ಲಿ ಬರೆದು ಕೊಂಡು ವಿದ್ಯಾರ್ಥಿಗಳಿಗೆ ನೀಡಿ. ಕಪ್ಪು ಹಲಗೆಯ ಮೇಲೆ ಸಮಾಸದ ಹೆಸರುಗಳನ್ನು ಬರೆಯಿರಿ.ವಿದ್ಯಾರ್ಥಿ ತನಗೆ ಸಿಕ್ಕಿರುವ ಉದಾಹರಣೆ ಗುರುತಿಸಿ ಸಂಬಂಧಿಸಿದ ಮನೆಗಳಲ್ಲಿ ಬರೆಯುಲು ಅನುಕೂಲಿಸಿ.ನಂತರ ಎಲ್ಲಾ ವಿದ್ಯಾರ್ಥಿಗಳು ಬರೆದು ಕೊಳ್ಳಲು ತಿಳಿಸಿ. |
| 21 | | ನೀಡಿದ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಬರೆಯುತ್ತಾರೆ. | 21.1 ವಿಭಕ್ತಿ ಪ್ರತ್ಯಯ ಗುರುತಿಸುವುದು.<br>21.2 ಆರಿಸಿ - ಹೆಸರಿಸಿ<br>21.3 ಪದವೊಂದು - ವಿಭಕ್ತಿ ಹಲವು | 21.1 ಸಿದ್ಧಪಡಿಸಿಕೊಂಡಿರುವ ಗದ್ಯಭಾಗವನ್ನು ನೀಡಿ, ವಿಭಕ್ತಿಪ್ರತ್ಯಯ ಬಹೊಂದಿರುವ ಪದಗಳನ್ನು ಗುರುತಿಸಿ ಬರೆಯಿಸಿ, ವಿಭಕ್ತಿ ಪ್ರತ್ಯ ಹೆಸರಿಸಲು ತಿಳಿಸಿ.<br>21.2 ವಿಭಕ್ತಿ ಹೆಸರುಗಳನ್ನು ಮತ್ತು ಪ್ರತ್ಯಗಳನ್ನು ಹೊಂದಿಸಿ ಬರೆಯಲಿ ತಿಳಿಸಿ.<br>21.3 ಕೆಲವು ನಾಮ ಪ್ರಕೃತಿಗಳನ್ನು ನೀಡಿ ಎಲ್ಲಾ ವಿಭಕ್ತಿ ಪ್ರತ್ಯಗಳನ್ನು ಕ್ರಮವಾಗಿ ಹಚ್ಚಿ ಬರೆಯುವಂತೆ ತಿಳಿಸಿ. |
| 22 | | ನೀಡಿದ ವಾಕ್ಯಗಳಲ್ಲಿರುವ ಕ್ರಿಯಾಪದಗಳನ್ನು ಗುರುತಿಸಿ , ಅವುಗಳಲ್ಲಿರುವ ಧಾತು , ಕಾಲಸೂಚಕ ಪ್ರತ್ಯಯ ಹಾಗೂ ಆಖ್ಯಾತ ಪ್ರತ್ಯಯಗಳನ್ನು ಗುರುತಿಸಿ ಬರೆಯುತ್ತಾರೆ. | 22.1 ಬನ್ನಿ ಹುಡುಕೋಣ<br>22.1 ಧಾತು ಗುರುತಿಸು<br>22.3 ಒಂದು | * ವಿದ್ಯಾರ್ಥಿಗಳು ತಿಳಿದಿರುವ ಕ್ರಿಯಾಪದಗಳನ್ನು ಪಟ್ಟಿ ಮಾಡಲು ತಿಳಿಸಿ.<br>22.1 ಪಠ್ಯ ಪುಸ್ತಕದ ನಿಗದಿತ ಭಾಗವೊಂದರಲ್ಲಿ ಬರುವ ಕ್ರಿಯಾಪದಗಳನ್ನು ಪಟ್ಟಿ ಮಾಡಿಸಿ ಧಾತುಗಳನ್ನು ಪ್ರತ್ಯೇಕಿಸಿ ಬರೆಯಲು ತಿಳಿಸಿ |

| | | | | |
|---|---|---|---|---|
| | | | ಧಾತು – ಹಲವು ಮಾತು<br><br>22.4 ಪದ ನಮ್ಮದ್ದು – ವಾಕ್ಯ ನಿಮ್ಮದ್ದು | 22.3 ಧಾತುಗಳನ್ನು ನೀಡಿ ಕ್ರಿಯಾಪದ ರೂಪಗಳನ್ನು ರಚಿಸಿ ಬರೆಯಿಸಿ.<br>**ಉದಾ**: ಓದು - ಓದಿದನು, ಓದುತ್ತಾನೆ, ಓದುವನು, ಓದಿದಳು, ಓದುತ್ತಾಳೆ, ಓದುವಳು, ಓದಿದರು,ಓದುತ್ತಾರೆ,ಓದುವರು …..<br>22.4 ವಿದ್ಯಾರ್ಥಿ ಗುಂಪುಗಳಿಗೆ ಐದ್ಯೆದು ಕ್ರಿಯಾಪದಗಳನ್ನು ಬರೆಯಿಸಿ. ಪರಸ್ಪರ ಗುಂಪುಗಳಲ್ಲಿ ಅದಲು- ಬದಲು ಮಾಡಿಸಿ ಅರ್ಥ ಪೂರ್ಣ ವಾಕ್ಯಗಳನ್ನು ವಾಕ್ಯಗಳನ್ನು ಮಾಡಿಸಿ. |
| 23 | | ನೀಡಿದ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗವನ್ನು, ಛಂದಸ್ಸಿನ ಹೆಸರನ್ನು ಬರೆಯುತ್ತಾರೆ. | 23.1 ಚಂದಕ್ಕಿಂತ ಚಂದ – ಈ ಛಂದೋಬಂಧ<br>23.2 ಚಿತ್ತಾರ-ಪ್ರಸ್ತಾರ<br>23.3 ಹೊಂದಿಸಿ ಬರೆಯಿರಿ. | 23.1 ಛಂದಸ್ಸಿಗೆ ಸಂಬಂಧಿಸಿದ ಪದಗಳನ್ನು ಚೌಕಗಳಲ್ಲಿ ಬರೆದು ಆ ಪದಗಳನ್ನು ಗುರುತಿಸಿ ಬರೆಯುವಂತೆ ತಿಳಿಸುವುದು.<br>ಉದಾ: ಗಣ, ಯತಿ,ಪ್ರಾಸ, ಮಾತ್ರೆ,ಕಂದ…….<br>23.2 ಹಿಂದಿನ ತರಗತಿಗಳಲ್ಲಿ ಪರಿಚಿತವಾಗಿರುವ ಪದ್ಯದ ಭಾಗಗಳನ್ನು ನೀಡಿ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಲು ಅನುಕೂಲಿಸಿ.<br>23.3 ಮಾತ್ರಗಣ ಹಾಗೂ ಅಕ್ಷರ ಗಣ ಛಂದಸ್ಸಿನ ಪ್ರಕಾರಗಳನ್ನು ಗುರುತಿಸಿ ವರ್ಗೀಕರಿಸಿ ಬರೆಯಲು ತಿಳಿಸಿ.<br>ಉದಾ: ಮಿನಿ, ಉತ್ಪಲಮಾಲಾ, |

| | | | | |
|---|---|---|---|---|
| | | | | ಕಂದ, ಚಂಪಕಮಾಲಾ…. |
| 24 | | ನೀಡಿದ ವಾಕ್ಯದಲ್ಲಿರುವ ಅಲಂಕಾರವನ್ನು ಗುರುತಿಸಿ, ಲಕ್ಷಣದೊಂದಿಗೆ ಸಮನ್ವಯ ಮಾಡಿ ಬರೆಯುತ್ತಾರೆ. | 24.1 ಹೋಲಿಸಿ ನೋಡು<br>24.2 ಅಲಂಕಾರ – ಸಮನ್ವಯ<br>24.3 ಹಾಡು ಕೇಳು – ಅಲಂಕಾರ ಹೇಳು | 24.1 ಭೀಮ- ಆನೆ, ಕಣ್ಣು – ಕಮಲ, ಶಾಂತಲಾ – ನವಿಲು ಈ ರೀತಿಯ ಪದಗಳನ್ನು ನೀಡಿ ಹೋಲಿಸಿ ಆಲಂಕಾರಿಕ ವಾಕ್ಯಗಳನ್ನು ರಚನೆ ಮಾಡಿಸಿ.<br>24.2 ಪರಿಚಿತವಾಗಿರುವ ಅಲಂಕಾರದ ವಾಕ್ಯಗಳನ್ನು ನೀಡಿ ಲಕ್ಷಣದೊಂದಿಗೆ ಸಮನ್ವಗೊಳಿಸಿ ಬರೆಯಿಸಿ.<br>24.3 ಕವಿರತ್ನ ಕಾಳಿದಾಸ ಚಲನ ಚಿತ್ರದ ಹಾಡು ಕೇಳಿಸಿ ಅಲಂಕಾರ ಸಮನ್ವಯ ಗೊಳಿಸಲು ಅನುಕೂಲಿಸಿ ( ಕಣ್ಣೆರಡು ಕಮಲ ಗಳಂತೆ..) |
| 25 | ಪ್ರಬಂಧಗಳು ಪತ್ರಲೇಖನಗಳು ಮತ್ತು ಸಂಭಾಷಣೆಗಳನ್ನು ಸೂಕ್ತ ಲೇಖನ ಚಿನ್ಹೆಯೊಂದಿಗೆ ಬರೆಯುವರು. | ನಿರ್ದಿಷ್ಟ ಪಡಿಸಿದ ವಿಷಯಗಳ ಮೇಲೆ ಪ್ರಬಂಧಗಳನ್ನು, ಬರೆಯುತ್ತಾರೆ. | 25.1 ಓದಿ ಮಾದರಿಯಂತೆ ಬರೆ<br>25.2 ಬರೆ ಬರೆ -ಪ್ರಬಂಧ ಬರೆ<br>25.3 ನನಗಿಷ್ಟವಾದ ಪ್ರಬಂಧ | 25.1ಸರಳವಾದ ಕೆಲವು ಪ್ರಬಂಧಗಳನ್ನು ನೀಡಿ ಓದಿಸಿ ಬರೆಯಿಸಿ.<br>25.2 ಪ್ರಬಂಧ ರಚನೆಯ ಹಂತಗಳ ಬಗ್ಗೆ ವಿವರಣೆ ನೀಡಿ, ನಿರ್ದಿಷ್ಟ ಸರಳವಾದ ವಿಷಯದ ಬಗ್ಗೆ ಪ್ರಬಂಧ ಬರೆಯಿಸಿ.<br>25.2 ವಿದ್ಯಾರ್ಥಿಗಳಿಗೆ ಇಷ್ಟವಾದ ಪ್ರಬಂಧವನ್ನು ಬರೆಯಿಸುವುದು. |
| 26 | | ನಿರ್ದಿಷ್ಟ ಪಡಿಸಿದ ವ್ಯಾವಹಾರಿಕ ಮತ್ತು ವೈಯಕ್ತಿಕ ಪತ್ರಗಳನ್ನು ಬರೆಯುತ್ತಾರೆ. | 26.1 ಕುಶಲವೇ – ಕ್ಷೇಮವೇ<br>26.2 ತಂದೆ – ತಾಯಿ | 26.1 ನೀಡಿದ ವಿಷಯಗಳನ್ನು ಆಧರಿಸಿ ವಿವಿಧ ರೀತಿಯ ಪತ್ರ ಬರೆಯಿಸಿ.<br>26.2 ನಿರ್ದಿಷ್ಟವಾದ ವಿಷಯಗಳನ್ನು ನೀಡಿ ಪತ್ರಗಳನ್ನು ಬರೆಯಿಸಿ. |

| | | | | |
|---|---|---|---|---|
| | | | ಗೊಂದು ಪತ್ರ 26.3 ಮಿತ್ರನಿಗೊಂದು ಪತ್ರ | 26.3 ವಿಷಯಗಳನ್ನು ನೀಡಿ ಇಷ್ಟವಾದ ಮಿತ್ರನಿಗೆ ಪತ್ರ ಬರೆಯಿಸಿ ಪೋಸ್ಟ್ ಮಾಡಿಸಿ. |
| 27 | ಪದ್ಯ ಮತ್ತು ಕಥೆಗಳ ಮೂಲಕ ತಮ್ಮ ಆಲೋಚನೆಗಳನ್ನು ಮೌಖಿಕವಾಗಿ ಮತ್ತು ಬರವಣಿಗೆಯ ರೂಪದಲ್ಲಿ ಕ್ರಿಯಾತ್ಮಕವಾಗಿ ಅಭಿವ್ಯಕ್ತಿಸುವರು. | ನೀಡಿದ ಪದ್ಯ ಸಾರಾಂಶವನ್ನು ಆಲೋಚಿಸಿ, ಅರ್ಥೈಸಿಕೊಂಡು ಬರೆಯುತ್ತಾರೆ. | 27.1 ಸಾರ ಸಂಗ್ರಹ 27.2 ಸಕ್ಷಿಪ್ತ ಬರವಣಿಗೆ 27.3 ಟಿಪ್ಪಣಿ ತಯಾರಿಕೆ. | 27.1ಆಯ್ದ ಪದ್ಯ ಭಾಗವೊಂದಕ್ಕೆ ಸಾರಾಂಶವನ್ನು ಬರೆಯಿಸಿ. 27.2 ಕಥೇಯನ್ನು ಹೇಳೀ ಸಂಕ್ಷಿಪ್ತವಾಗಿ ಬರೆಯಿಸಿ. 27.3 ಗದ್ಯ ಭಾಗವೊಂದನ್ನು ಆಯ್ಕೆ ಟಿಪ್ಪಣಿ ಬರೆಯಲು ಅನುಕೂಲಿಸಿ |
| 28 | | ನೀಡಿದ ಕಥೆಗಳ / ಲೇಖನ ಗಳನ್ನು ಓದಿ ಅರ್ಥೈಸಿಕೊಂಡು ಕೇಳಿದ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸುತ್ತಾರೆ ಬರೆಯುತ್ತಾರೆ/ | 28.1 ಕಥೆ ಕಟ್ಟೋಣ ಬನ್ನಿ . 28.2 ಲೇಖನ ಓದಿ – ಉತ್ತರ ಬರೆ 28.3 ಕಥೆ ಓದು – ಸಂಕ್ಷಿಪ್ತ ಮಾಡು | 28.1 ವಿದ್ಯಾರ್ಥಿಗಳಿಗೆ ಸುಳುಹುಗಳನ್ನು ನೀಡಿ ಮತ್ತು ಸೂಚನೆಗಳನ್ನು ನೀಡಿ ಕಥೆಬರೆಯಿಸಿ. 28.3 ಸಣ್ಣ ಕಥೆಯೊಂದನ್ನು ಓದಿ ಸಂಕ್ಷಿಪ್ತಗೊಳಿಸಲು ಬರೆಯಲು ಮಾರ್ಗದರ್ಶನ ನೀಡಿ |
| 29 | ಮನವಿ ಪತ್ರಗಳು / ಅರ್ಜಿಗಳು / ದೂರು / ವರದಿ ಪತ್ರಗಳನ್ನು ಸ್ವತಂತ್ರವಾಗಿ ಬರೆಯುವರು. | ನೀಡಿದ ವಿಷಯಗಳನ್ನು ಕುರಿತು ಪತ್ರಗಳನ್ನು ಸ್ವತಂತ್ರವಾಗಿ ಬರೆಯುತ್ತಾರೆ. | 29.1 ಮನವಿ ಪತ್ರ ಬರೆಯೋಣ ಮಿತ್ರ 29.2 ಸಮಸ್ಯೆಗೊಂದು ಪತ್ರ 29.3 ಶಾಲೆಗೊಂದು ಪತ್ರ | 29.1 ತರಗತಿಯ ಮೂಲೆಗಳಿಗೆ ವಿವಿಧ ಕಛೇರಿಗಳ ಹೆಸರುಗಳನ್ನು ಅಂಟಿಸುವುದು ,ವಿದ್ಯಾರ್ಥಿ ಗುಂಪುಗಳಿಗೆ ಸಮಸ್ಯೆಗಳನ್ನು ಚರ್ಚಿಸಿ ಸಂಬಂಧಿಸಿದ ಕಛೇರಿಗಳಿಗೆ ಮನವಿ ಪತ್ರ ಬರೆಯಲು ಮಾರ್ಗದರ್ಶನ ನೀಡಿ ಉದಾ; ಗ್ರಾಮ ಪಂಚಾಯಿತಿ, ತಾಲೂಕು ಕಛೇರಿ …. |

| | | | | |
|---|---|---|---|---|
| 30 | | ನೀಡಿದ ವಿಷಯಗಳನ್ನು ಕುರಿತು ವರದಿಯನ್ನು ಸ್ವತಂತ್ರವಾಗಿ ಬರೆಯುತ್ತಾರೆ. | 30.1 ವರದಿಯ ಸರದಿ<br>30.2 ಶಾಲಾ ವರದಿ<br>30.3 ಗ್ರಾಮ ವರದಿ | 30.1 ವರದಿ ಸಿದ್ದ ಪಡಿಸುವ ಬಗ್ಗೆ ವಿವರ ನೀಡಿ, ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದ ಬಗ್ಗೆ ಮಾಹಿತಿ ನೀಡಿ ಪತ್ರಿಕಾ ವರದಿ ತಯಾರಿಸಲು ಸೂಚನೆ ನೀಡುವುದು.<br>ಉದಾ: ಗಣರಾಜ್ಯೋತ್ಸವ, ಕ್ರೀಡಾಕೂಟ<br>30.2 ಇಕೋ ಕ್ಲಬ್, ಸಾಹಿತ್ಯ ಸಂಘ ಕಾರ್ಯಕ್ರಗಳ ಬಗ್ಗೆ ವರದಿ ಬರೆಯಿಸಿ.<br>30.3 ಗ್ರಾಮದಲ್ಲಿರುವ ಸಂಘ ಸಂಸ್ಥಗಳು ಏರ್ಪಡಿಸುವ ವಿವಿಧ ಕಾರ್ಯಕ್ರಮಗಳನ್ನು ಕುರಿತು ವರದಿ ತಯಾರಿಸಲು ಮಾರ್ಗದರ್ಶನ ನೀಡಿ. |